# ಯೇಸುವಿನ ಶಿಶು ಥೆರೇಸ್

ಸ್ವರ್ಣಗೌರಿ

**ಲಿಸಿಯಕ್ಸ್‌ನ ಸಂತ ಥೆರೇಸ್‌ಳ ಜೀವನ ಅತ್ಯಂತ ಹೃದಯಸ್ಪರ್ಶಿಯಾಗಿದೆ. ಪೂರ್ಣ ಶರಣಾಗತಿಯ ಭಾವ ಆಕೆಯ ಜೀವನದಲ್ಲಿ ಎದ್ದು ಕಾಣುತ್ತದೆ. ಆ ದಿವ್ಯ ಜೀವನದ ಕಿರು ಪರಿಚಯ ಮಾಡಿಕೊಟ್ಟಿರುವ ಸ್ವರ್ಣಗೌರಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.**

**ಎರಡು** ವರ್ಷದ ಪುಟ್ಟ ಮುಗ್ಧ ಶಿಶುವಿನ ತಾಯಿಯು ಒಮ್ಮೆ, 'ನೀನು ಮುಂದೆ ಸಂನ್ಯಾಸಿನಿ ಆಗುವೆ' ಎಂದು ಆ ಶಿಶುವಿಗೆ ಹೇಳಿದಾಗ, ಆ ಪದದ ಅರ್ಥವನ್ನೇ ಅರಿಯದ ಆ ಶಿಶುವು ತನ್ನನ್ನು ಅಂದೇ ಕ್ರಿಸ್ತನಿಗೆ ಸಮರ್ಪಿಸಿಕೊಂಡು ಬಿಟ್ಟಿತು. ಆ ಶಿಶುವೇ ಮುಂದೆ ಪ್ರಸಿದ್ಧಳಾದ ಸಂತ ಥೆರೇಸ್.

ಇಪ್ಪತ್ತು ವರ್ಷದ ಸ್ಫುರದ್ರೂಪಿ ನವಯುವಕ ಲುಯಿಸ್ ಮಾರ್ಟಿನ್‌ನು ಕ್ರಿಸ್ತನಿಗೆ ತನ್ನ ಜೀವನವನ್ನೇ ಅರ್ಪಿಸ ಬೇಕೆಂಬ ದೃಢನಿರ್ಧಾರದಿಂದ ಸಂತ ಬರ್ನಾರ್ಡ್‌ರ ಚರ್ಚಿಗೆ ಹೋದ. ಆದರೆ ದೈವವು ಆತನಿಂದ ಬೇರೊಂದನ್ನು ಆಶಿಸಿತ್ತು. ಹಲವು ಕಾಲದಿಂದ ಪೋಷಿಸಿಕೊಂಡು ಬಂದ ತನ್ನ ಆ ಆಸೆಯು ನೆರವೇರದೆ ಖಿನ್ನನಾಗಿ ಹಿಂದಿರುಗಿದ.

ಕೆಲವು ವರ್ಷಗಳ ತರುವಾಯ ಅಲೆನ್‌ಕಾನ್ ಚರ್ಚಿನಲ್ಲಿ ಅಂಥದೇ ಇನ್ನೊಂದು ಘಟನೆ ನಡೆಯಿತು. ಜೆಲೀ ಗ್ಯುರಿನ್ ಎಂಬ ಸುಂದರ ಯುವತಿಯು ತನ್ನ ಅಕ್ಕಂದಿರಂತೆ ತಾನೂ ಕ್ರಿಸ್ತನ ಸೇವೆಗೆ ತನ್ನ ಜೀವನವನ್ನು ಮುಡುಪಾಗಿಡುವ ಬಯಕೆಯಿಂದ ಹೋದಳು. ಇಲ್ಲಿಯೂ ದೈವೇಚ್ಛೆಯು ಬೇರೆಯಾಗಿತ್ತು. ನಿರಾಶಳಾಗಿ ಹಿಂದಿರುಗಿದ ಜೆಲೀಯು ಕ್ರಿಸ್ತನ ಸೇವೆಗೆ ತಾನು ಯೋಗ್ಯಳಲ್ಲದ ಕಾರಣ ಆತನಿಗೆ ಅರ್ಪಿಸಬಹುದಾದ ಮಕ್ಕಳನ್ನಾದರೂ ಪಡೆಯಲು ಇಚ್ಛಿಸಿ ಪ್ರಾರ್ಥಿಸತೊಡಗಿದಳು. ಆ ಪ್ರಾರ್ಥನೆಯ ಫಲವಾಗಿ ಜುಲೈ ೧೨, ೧೮೫೮ರಂದು ಲುಯಿಸ್ ಮಾರ್ಟಿನ್‌ನ ಧರ್ಮಪತ್ನಿಯಾದಳು ಅಲೆನ್‌ಕಾನ್ ಚರ್ಚಿನಲ್ಲಿ!

> **ಬಾಲ್ಯದಲ್ಲೇ ಯಾರು ದೇವರಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವರೋ ಅವರು ಮಕರಂದವು ಇನ್ನೂ ಹೀರಲ್ಪಡದ ಪುಷ್ಪದಂತೆ ಧನ್ಯರು.**
>
> ಶ್ರೀರಾಮಕೃಷ್ಣ

ಆ ಹೂದೋಟದಲ್ಲಿ ಒಂಭತ್ತು ಸುಂದರ ಪುಷ್ಪಗಳು ಅರಳಿನಿಂತವು. 'ನನ್ನ ಹೂದೋಟದ ನಾಲ್ಕು ಪುಷ್ಪಗಳು ಆಗಲೇ ಕ್ರಿಸ್ತನ ರಾಜ್ಯವನ್ನು ಸೇರಿದವು. ಇನ್ನುಳಿದ ಐದು ಪುಷ್ಪಗಳು ಈ ಪ್ರಪಂಚದ ಕೆಸರಿನಲ್ಲಿ ಮತ್ತಷ್ಟು ಕಂಪನ್ನು ಪಡೆದು ಆ ರಾಜ್ಯವನ್ನೆ ಸೇರುವುವು' ಎಂದು ಹೇಳುತ್ತಾಳೆ ಜೆಲೀ ಗ್ಯುರಿನ್. ಹುಟ್ಟಿದ ಗಂಡು ಮಕ್ಕಳೆಲ್ಲಾ ಅರಳುವ ಮುನ್ನವೇ ಬಾಡಿಹೋದ ಕಾರಣ ಚರ್ಚಿನ ಫಾದರ್ ಆಗಲು ಮಗನನ್ನು ಹಡೆಯಬೇಕೆಂಬ ಆ ದಂಪತಿಗಳ ಆಸೆಯೂ ನೆರವೇರದೆಹೋಯಿತು. ಆದರೆ ಆ ದೈವಿಕ ದಂಪತಿಗಳ ಕೀರ್ತಿ ಪತಾಕೆಯನ್ನು ಆಫ್ರಿಕಾ, ಇಂಡಿಯಾ, ಚೈನಾ ದೇಶಗಳಲ್ಲಿ ಮಾತ್ರವಲ್ಲದೆ ಜಗತ್ತಿನ ಉದ್ದಗಲಕ್ಕೂ ಹಾರಿಸುವ ಮುದ್ದಾದ ಹೆಣ್ಣು ಶಿಶುವಿನ ಜನನವಾಯಿತು, ಜನವರಿ ೨, ೧೮೭೩ರಂದು. ಎಲ್ಲರ ಕಣ್ಮನಗಳನ್ನು ಸೆಳೆಯುವಂತಿದ್ದ ಆ ಮುಗ್ಧ ಶಿಶುವು ತಂದೆತಾಯಿ, ಅಕ್ಕಂದಿರೆಲ್ಲರ ಅಚ್ಚುಮೆಚ್ಚಿನ ಶಿಶುವಾಗಿ ಬೆಳೆಯತೊಡಗಿತು. 'ನನ್ನ ಚಿಕ್ಕ ರಾಣಿ' ಎಂದೇ ಅಕ್ಕರೆಯಿಂದ ಕರೆಯುತ್ತಿದ್ದರು ತಂದೆ. ಆ ಶಿಶುವೇ ಥೆರೇಸ್ ಮಾರ್ಟಿನ್.

ಪ್ರತಿದಿನ ರಾತ್ರಿ ಮಲಗುವಾಗ ಮೂರು ವರ್ಷದ ಆ ಪುಟ್ಟ, ಸರಳ ಥೆರೇಸ್, 'ಅಮ್ಮಾ, ಈ ದಿನ ನಾನು ಒಳ್ಳೆಯವಳು ಆಗಿದ್ದೆ ನಲ್ಲವೆ? ದೇವತೆಗಳು ಸುಪ್ರೀತರಾದರೆ?' ಎಂದು ಕೇಳುತ್ತಿದ್ದಳು. ತಾಯಿಯಿಂದ 'ಹೌದು' ಎಂದುತ್ತರ ಬಂದಮೇಲೆಯೇ ಮಲಗುತ್ತಿದ್ದಳು. ಇಲ್ಲದಿದ್ದರೆ ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಅಳುತ್ತಿದ್ದಳು. ಶ್ರೀರಾಮಕೃಷ್ಣ ಪರಮಹಂಸರು, 'ಬಾಲ್ಯದಲ್ಲೇ ಯಾರು ದೇವರಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವರೋ ಅವರು ಮಕರಂದವು ಇನ್ನೂ ಹೀರಲ್ಪಡದ ಪುಷ್ಪದಂತೆ ಧನ್ಯರು' ಎನ್ನುತ್ತಿದ್ದರು.

ನಾಲ್ಕು ವರ್ಷ ಎಂಟು ತಿಂಗಳಿರುವಾಗಲೇ ತಾಯಿಯು ಕ್ರಿಸ್ತನ ರಾಜ್ಯವನ್ನು ಸೇರಿದ ಕಾರಣ ಅಕ್ಕಂದಿರ ಪ್ರೀತಿಯೇ ಆಶ್ರಯವಾಯಿತು. ಆ ದುರ್ಘಟನೆಯನ್ನು ಕುರಿತು ಹೀಗೆಂದು ಬರೆಯುತ್ತಾಳೆ : 'ಸದಾ ಆನಂದದಿಂದ ಇದ್ದ ನನ್ನ ಸ್ವಭಾವವು ಬದಲಾಯಿತು. ನಾನು ತುಂಬಾ ಪುಕ್ಕಲು, ನಾಚಿಕೆ ಹಾಗೂ ಸೂಕ್ಷ್ಮ ಸ್ವಭಾವದವಳಾದೆ. ಯಾರಾದರೂ ನನ್ನನ್ನು ದಿಟ್ಟಿಸಿ ನೋಡಿದರೂ ಸಾಕು ಅತ್ತುಬಿಡುತ್ತಿದ್ದೆ. ಮತ್ತೆ ಹದಿನಾಲ್ಕು ವರ್ಷದವಳಾದಾಗಲೇ ಆ ಹಿಂದಿನ ಆನಂದದ ಸ್ಥಿತಿಯನ್ನು ಪಡೆದೆ, ಹಾಗೂ ಜೀವನದ ಧಾರ್ಮಿಕ ಮುಖದ ಪರಿಚಯವಾಯಿತು.'



ಸಂತ ಥೆರೇಸ್

ಒಮ್ಮೆ ತಂದೆಯೊಡನೆ ಅಡ್ಡಾಡಲು ಹೋಗುತ್ತಿರುವಾಗ ದಾರಿಯಲ್ಲಿ ಹೆಳವನೊಬ್ಬನನ್ನು ಕಂಡ ಥೆರೇಸ್ ತನ್ನ ಬಳಿ ಇದ್ದ ಒಂದು ಬಿಡಿಗಾಸನ್ನು ಕೊಡಲು ಮುಂದಾದಳು. ಆದರೆ ಆ ಭಿಕ್ಷುಕನು ಮಗುವನ್ನೇ ಪ್ರೀತಿಯಿಂದ ದಿಟ್ಟಿಸುತ್ತಾ ಹೊರಟು ಹೋದನು. ಆ ಘಟನೆಯನ್ನು ಕುರಿತು, 'ಆಗ ನನಗೆ ಹೇಗೆನಿಸಿತು ಎಂಬುದನ್ನು ಹೇಳಲಾರೆ. ನಾನು ಆತನಿಗೆ ಸಹಾಯ ಮಾಡಲು, ಸಾಂತ್ವನ ನೀಡಲು ಹೋದೆ, ಆದರೆ ಅದು ನೋವನ್ನೇ ಕೊಟ್ಟಿತು. ಅಂದೇ ನಿರ್ಧರಿಸಿದೆ "ಮೊದಲ ಪ್ರಭುಭೋಜನ"(*Holy Sacr -ament* ) ದಿನದಂದು ಈತನಿಗಾಗಿ ಕ್ರಿಸ್ತನನ್ನು ಪ್ರಾರ್ಥಿಸುವೆ ಎಂದು. ಏಕೆಂದರೆ ಆ ದಿನ ಬೇಡಿಕೆಗಳೆಲ್ಲಾ ಈಡೇರುವುವು. ಐದು ವರ್ಷಗಳ ಬಳಿಕ ಮರೆಯದೆ ಆ ದಿನ ಪ್ರಾರ್ಥನೆ ಮಾಡಿದೆ. ನನ್ನ ಬಾಲಿಶ ಪ್ರಾರ್ಥನೆ ಖಂಡಿತ ಕ್ರಿಸ್ತನ ಕಿವಿಮುಟ್ಟಿರುತ್ತದೆ' ಎಂದು ಬರೆಯುತ್ತಾಳೆ. ಆ ಚಿಕ್ಕ ವಯಸ್ಸಿನಲ್ಲೇ ಅಂತಹ ಉದಾತ್ತ ಮನಸ್ಸನ್ನು ಥೆರೇಸ್ ಬೆಳೆಸಿಕೊಂಡಿದ್ದಳು.

ತಂದೆಯ ಔದಾರ್ಯವನ್ನು ಮಗುವೂ ಹುಟ್ಟಿದಂದಿನಿಂದಲೇ ಮೈಗೂಡಿಸಿಕೊಂಡಿತ್ತು. ಒಮ್ಮೆ ಲುಯಿಸ್‌ನು ಊರಿಗೆ ಹಿಂದಿರುಗುತ್ತಿರುವಾಗ ರೈಲ್ವೇ ನಿಲ್ದಾಣದಲ್ಲಿ ಅಪಸ್ಮಾರ ರೋಗ ದಿಂದ ನರಳುತ್ತಿದ್ದ ಒಬ್ಬ ಬಡವನನ್ನು ಕಂಡನು. ಅವನಿಗೆ ಸಹಾಯ ಮಾಡಲು ತನ್ನ ತಲೆಯ ಮೇಲಿದ್ದ ಟೋಪಿಯನ್ನೇ ಭಿಕ್ಷಾಪಾತ್ರೆ ಮಾಡಿಕೊಂಡು ಭಿಕ್ಷೆ ಬೇಡಿ, ಧನ ಸಹಾಯ ಮಾಡಿ ಆತನ ಕೃತಜ್ಞತೆಗೆ ಪಾತ್ರನಾದ!

'T' ಆಕಾರದಲ್ಲಿರುವ ನಕ್ಷತ್ರಪುಂಜವು ಆಕಾಶದಲ್ಲಿ ಕಾಣಿಸುತ್ತಲೇ ಥೆರೇಸ್ ತಂದೆಗೆ ಆನಂದದಿಂದ ಚೀರಿ ಹೇಳುತ್ತಿದ್ದಳು, 'ಪಪ್ಪ, ಸ್ವರ್ಗದಲ್ಲಿ ನನ್ನ ಹೆಸರು ಮೂಡಿದೆ' ಎಂದು. ಯಾವಾಗಲೂ ಆ ದಿವ್ಯ ಸಾಮ್ರಾಜ್ಯವನ್ನೇ ನಿರೀಕ್ಷಿಸುತ್ತಿತ್ತು ಆ ಕೋಮಲ ಮುಗ್ಧ ಪವಿತ್ರ ಮನಸ್ಸು.

ಒಮ್ಮೆ ಶಾಲೆಯಲ್ಲಿ ಉಪಾಧ್ಯಾಯರು, 'ರಜಾ ದಿನಗಳನ್ನು ಹೇಗೆ ಕಳೆದಿರಿ?' ಎಂದು ಮಕ್ಕಳನ್ನು ಕೇಳಿದಾಗ ಈ ಕ್ರಿಸ್ತನ ಪುಟ್ಟ ಭಕ್ತೆಯು, 'ನಾನು ಕೋಣೆಯ ಒಂದು ಮೂಲೆಯಲ್ಲಿ ಪರದೆಯ ಹಿಂದೆ ಅವಿತುಕೊಂಡು ದೇವರ ಬಗ್ಗೆ, ಈ ಪ್ರಪಂಚದ ನಶ್ವರತೆಯ ಬಗ್ಗೆ ಯೋಚಿಸುತ್ತಿದ್ದೆ' ಎಂದು ಉತ್ತರಿಸಿದಳು! ಹೀಗೆ ಬಾಲ್ಯ ದಿಂದಲೇ ಮಾನಸಿಕ ಪ್ರಾರ್ಥನೆಯ ಅಭ್ಯಾಸ ಬೆಳೆಯಿತು. ಪ್ರಾರ್ಥನೆಯ ಮಹತ್ತ್ವದ ಬಗ್ಗೆ ಮುಂದೆ ತನ್ನ ಜೀವನ ಚರಿತ್ರೆ ಯಲ್ಲಿ ಥೆರೇಸ್ ಹೀಗೆಂದು ಬರೆಯುತ್ತಾಳೆ : 'ಪ್ರಾರ್ಥನೆ ಹಾಗೂ ತ್ಯಾಗ ನನ್ನ ಅಜೇಯ ಅಸ್ತ್ರಗಳು. ಪ್ರಾರ್ಥನೆಯಲ್ಲಿನ ಶಕ್ತಿ ಅದ್ಭುತ! ರಾಜನ ಬಳಿ ಏನನ್ನಾದರೂ ಕೇಳಿ ಪಡೆಯುವ ಹಕ್ಕುಳ್ಳ ರಾಣಿಯಂತೆ ಅದು. ಆತ್ಮನನ್ನು ಪರಮಾತ್ಮನೊಡನೆ ಒಂದಾಗಿಸುವ ಅತ್ಯುತ್ತಮ, ದಿವ್ಯ, ಅಲೌಕಿಕ ಸೊಗಸಾದ ಅಸ್ತ್ರ ಅದು.'

**ಜೀವನವೊಂದು ಹಡಗಿನಂತೆ, ಅಲೆಗಳ ಮಧ್ಯೆ ಚಲಿಸುತ್ತಾ ಕುರುಹೇ ಇಲ್ಲದೆ ಹೊರಟು ಹೋಗುವುದು ಒಂದು ದಿನ**

—ಸಂತ ಥೆರೇಸ್

'ಮೊದಲ ಪ್ರಭುಭೋಜನ ದಿನ'ಕ್ಕಾಗಿ ಕಾತರದಿಂದ ಕಾಯುತ್ತಿದ್ದ ಥೆರೇಸ್ ಏಸುವಿನೊಡನೆ ಆದ ಪ್ರಥಮ ಸಮಾಗಮದ ಆನಂದವನ್ನು ಕುರಿತು, 'ಕೆಲವು ವಿಷಯಗಳು ಬೆಳಕಿಗೆ ಬಂದರೆ ತಮ್ಮ ಸುವಾಸನೆಯನ್ನು ಕಳೆದುಕೊಳ್ಳುತ್ತವೆ. ಹಾಗೆಯೇ ನಮ್ಮ ಅಂತರಂಗದ ಭಾವನೆಗಳೂ, ಸುಖವೂ ತಮ್ಮ ಗೂಢಾರ್ಥವನ್ನು ಕಳೆದುಕೊಳ್ಳದೆ ಬರವಣಿಗೆಯಲ್ಲಿ ಮೂಡಲಾರವು' ಎಂದು ಬರೆಯುತ್ತಾಳೆ. 'ಈ ಪ್ರಪಂಚದ ಎಲ್ಲಾ ಸಾಂತ್ವನಗಳು ನನ್ನ ಪಾಲಿಗೆ ಕಹಿಯಾಗುವಂತೆ ಮಾಡು ತಂದೆ' ಎಂದು ದಿನನಿತ್ಯವೂ ಪ್ರಾರ್ಥಿಸುತ್ತಿದ್ದಳಂತೆ!

ಭಗವಂತನನ್ನು ಪ್ರೀತಿಸಿದರೆ ಕೇವಲ ಕಲ್ಲುಮುಳ್ಳಿನ ಹಾದಿಯನ್ನೇ ಸವೆಸಬೇಕಾಗುತ್ತದೆ ಎನ್ನುವ ಮಾತು ಸತ್ಯವಾಯಿತು ಥೆರೇಸ್‌ಳ ಜೀವನದಲ್ಲಿ. ಹದಿನಾಲ್ಕು ವರ್ಷದ ಈ ಯುವತಿಯು ಕ್ರಿಸ್ತನಿಗೆ ತನ್ನನ್ನು ಅರ್ಪಿಸುವ ಉದ್ದೇಶದಿಂದ ಚರ್ಚ್ ಸೇರಲು ಬಯಸಿದಾಗ ಕಷ್ಟಗಳ ಸರಮಾಲೆಯನ್ನೇ ಎದುರಿಸಬೇಕಾಯಿತು. ಚರ್ಚಿನ ನಿಯಮಕ್ಕನುಸಾರ ಸಂನ್ಯಾಸಿನಿಯಾಗಲು ವಯೋಮಿತಿ ೨೧ ವರ್ಷ. ಅತ್ಯಂತ ಪ್ರೀತಿಸುವ ತಂದೆಯ ಬಂಧನ ಒಂದೆಡೆ ಯಾದರೆ, ಮತ್ತೊಂದೆಡೆ ನಿಯಮವನ್ನು ಉಲ್ಲಂಘಿಸಲು ಒಲ್ಲದ ಫಾದರ್, ಬಿಷಪ್, ಪೋಪ್‌ರ ಆಗ್ರಹ. ಆ ಘಟನೆಯನ್ನು ಕುರಿತು, 'ನಾನು ನನ್ನ ಆನಂದವನ್ನು ಕೊಂಡುಕೊಳ್ಳಲು ಅಪಾರವಾದ

ಬೆಲೆಯನ್ನು ತೆರಬೇಕಾಯಿತು. ಇವುಗಳನ್ನೆದುರಿಸಲು ಏಸುವಿನ ಮೇಲಿದ್ದ ಪ್ರೇಮವೊಂದೇ ಸಂಜೀವಿನಿಯಾಯಿತು ನನ್ನ ಪಾಲಿಗೆ. ಆದರೆ ಇಂದು ಈ ಕಷ್ಟಗಳೆಲ್ಲಾ ತುಂಬ ಸಾಮಾನ್ಯವಾಗಿ ಕಾಣುತ್ತಿವೆ. ಇನ್ನು ಸಾವಿರಪಾಲು ಹೆಚ್ಚು ಬೆಲೆಯನ್ನಾದರೂ ತೆರುತ್ತಿದ್ದೆ ಆತನ ಪ್ರೀತಿಗಾಗಿ' ಎಂದು ಬರೆಯುತ್ತಾಳೆ. ದಾರಿಗಡ್ಡಲಾದ ಆ ಅಡೆತಡೆಗಳನ್ನು ಕ್ರಿಸ್ತನ ಮೇಲಿದ್ದ ಅಗಾಧವಾದ ಪ್ರೀತಿಯಿಂದ ಎದುರಿಸುತ್ತಾ ಧೈರ್ಯ ಸ್ಥೈರ್ಯಗಳ, ನಮ್ರತೆ ದೈನ್ಯತೆಗಳ ತವರಾದಳು.

**ಮೂರು ವರ್ಷ ವಯಸ್ಸಿನವಳಾದಾಗಿನಿಂದಲೂ ನಾನು ದೇವರಿಗೆ ಏನನ್ನೂ ತಿರಸ್ಕರಿಸದೆ ನೀಡಿದೆ.... ಪ್ರೀತಿಯನ್ನು ಹೊರತು ಬೇರೇನೂ ನೀಡಲಿಲ್ಲ, ಆತನೂ ಅದನ್ನು ಹಿಂತಿರುಗಿಸಿದ, ಪ್ರೀತಿಯಿಂದಲೇ.**

—ಸಂತ ಥೆರೇಸ್

ಹದಿನೈದು ವರ್ಷಕ್ಕೇ ಚರ್ಚ್ ಸೇರಿದ ಥೆರೇಸ್‌ಳ ಜೀವನ ಹೂವಿನ ಹಾಸಿಗೆಯಾಗದೆ ಮುಳ್ಳಿನ ಪಥವಾಯಿತು. ಆ ಕಷ್ಟದ ದಿನಗಳನ್ನು ಕುರಿತು, 'ಕ್ರಿಸ್ತನ ಆ ಅಮೂಲ್ಯ ಕೃಪೆಗೆ ನಾನು ಆಭಾರಿಯಾಗಿರುವೆ. ಇಲ್ಲಿ ಎಲ್ಲರೂ ನನ್ನನ್ನು ಪ್ರೀತಿಸಿದ್ದರೆ ನಾನು ಅವರಲ್ಲಿ ದೇವರನ್ನು ಕಾಣುವ ಬದಲು ಆ ಪ್ರೀತಿಯ ಬಂಧನದಲ್ಲೆ ಕೊಚ್ಚಿಹೋಗುತ್ತಿದ್ದೆ. ಅಬ್ಬಾ! ಈ ಅನರ್ಥದಿಂದ ಪಾರಾದೆ. ಕಷ್ಟ, ದುಃಖಗಳು ತನ್ನೆರೆಡೂ ಕೈಗಳನ್ನು ಚಾಚಿ ನನ್ನನ್ನು ಬಾಚಿ ತಬ್ಬಿಕೊಂಡವು. ಅವುಗಳನ್ನು ಪ್ರೀತಿಸಿ ಸ್ವಾಗತಿಸುವುದನ್ನು ಕಲಿತೆ' ಎಂದು ತನ್ನ ಜೀವನಚರಿತ್ರೆಯಲ್ಲಿ ಬರೆಯುತ್ತಾಳೆ. ಈ ಪ್ರಪಂಚದಲ್ಲಿ ನೋವನ್ನನುಭವಿಸದೆ ಯಾವ ಕೆಲಸವೂ ಫಲಕಾರಿಯಾಗುವುದಿಲ್ಲ. ದೈಹಿಕ ನೋವು, ಮಾನಸಿಕ ಯಾತನೆ ಇವೇ ಮೊದಲಾದ ಆ ಭಗವಂತನೊಬ್ಬನಿಗೇ ತಿಳಿಯುವ ಕೊನೆ ಮೊದಲಿಲ್ಲದ ಪರೀಕ್ಷೆಗಳನ್ನು ಎದುರಿಸಲೇಬೇಕು.

ಬಾಲಕಿಯೆಂದು ಚರ್ಚಿನ ಆಧ್ಯಾತ್ಮಿಕ ನಿಯಮಗಳಾವುದರಲ್ಲೂ ವಿನಾಯಿತಿ ದೊರೆಯಲಿಲ್ಲ. ಕೆಲವೊಮ್ಮೆ ಜೊತೆಗಾರರು ಅವಳ ಮುಖಭಾವವು ಸಪ್ಪೆಯಾಗಿರುವುದನ್ನು ನೋಡಿ ನಿಯಮಗಳನ್ನು ಅವಳಿಗಾಗಿ ಸಡಿಲಗೊಳಿಸಲು ಪ್ರಯತ್ನಿಸಿದರೂ ಒಪ್ಪದೆ ತನ್ನ ಶಕ್ತಿಮೀರಿ ಅವುಗಳನ್ನು ಪಾಲಿಸುತ್ತಿದ್ದಳು. ಒಮ್ಮೊಮ್ಮೆ ಎಷ್ಟು ಬಳಲಿರುತ್ತಿದ್ದಳೆಂದರೆ, ಮುಂದೆ ಅವಳೇ ಹೇಳುತ್ತಾಳೆ, ತನ್ನ ಕೋಣೆಯಲ್ಲಿ ಉಡುಪನ್ನು ಬದಲಾಯಿಸಲು ಒಂದು ಗಂಟೆ ಬೇಕಾಗುತ್ತಿತ್ತು ಎಂದು! ಎಷ್ಟೋ ಬಾರಿ ತೀವ್ರವಾದ ತಲೆನೋವು, ತಲೆಸುತ್ತು, ಜ್ವರ ಮುಂತಾದ ದೈಹಿಕ ಖಾಯಿಲೆಗಳಿಂದ ನರಳುತ್ತಿದ್ದರೂ ಲೆಕ್ಕಿಸದೆ ಬೆಳಗಿನ ಆರಾಧನೆಗೆ ಸಹಾಯ ಮಾಡುತ್ತಿದ್ದಳು. ಹಿಮದಿಂದ ಕೂಡಿದ ಚಳಿಗಾಲದಲ್ಲಿ ಅವಳ ಸುಕೋಮಲ ಶರೀರವು ಬಹಳ ಯಾತನೆಯನ್ನು ಅನುಭವಿಸುತ್ತಿತ್ತು. ಒಂದು ಸಂಜೆ ಕ್ರಿಸ್ತನ ಬಳಿ ಸ್ತೋತ್ರಪಠನಕ್ಕಾಗಿ ಎಲ್ಲರೂ ಕುಳಿತರು. ಜ್ವರದ ತಾಪದಿಂದ ನರಳುತ್ತಿದ್ದ ಥೆರೇಸ್‌ಳು ಬಹಳ ಪ್ರಯಾಸದಿಂದ ಭಾಗವಹಿಸಲು ಬಂದಳು. ಹಿರಿಯ ಸಂನ್ಯಾಸಿನಿಯೊಬ್ಬರು ಅವಳಿಗೆ ನಿಲ್ಲಲು ಹೇಳಿದರು. ಕಿಂಚಿತ್ತೂ ಹಿಂಜರಿಯದೆ ತಕ್ಷಣ ಎದ್ದು ನಿಂತಳು, ಪಠನ ಮುಗಿಯುವವರೆಗೂ!

ಕೆಲವರು ಥೆರೇಸ್‌ಳ ಸದ್ಗುಣಗಳ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಅವಳು ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಅಷ್ಟೇ ಅಲ್ಲದೆ ಇತರ ಸಂನ್ಯಾಸಿನಿಯರು ತನ್ನನ್ನು ದುರುಪಯೋಗ ಪಡಿಸಿಕೊಂಡಾಗ ಅವಳು ನಲಿದಾಡುತ್ತಿದ್ದಳು. ಅವರು ಆಕೆಯ ತೇಜೋವಧೆ ಮಾಡಿದರು, ಲೇವಡಿ ಮಾಡಿದರು, ನಗೆಗೆ ಗುರಿ ಮಾಡಿದರು. ಅವಳ ಮುಗ್ಧತನವನ್ನು ತಪ್ಪಾಗಿ ಗ್ರಹಿಸಿ ಅದನ್ನು ಮೂರ್ಖತನವೆಂದು ವ್ಯಾಖ್ಯಾನ ಮಾಡಿದರು.

ತನ್ನ ಪುಟ್ಟ ಕೋಣೆಯನ್ನು ಆಕೆ ಶುಚಿಯಾಗಿಯೂ ಸುವ್ಯವಸ್ಥಿತವಾಗಿಯೂ ಇಟ್ಟುಕೊಳ್ಳಲು ಬಯಸಿದಳು. ಅವಳು ಇಲ್ಲದಾಗ ಕೆಲವರು ಆ ಕೋಣೆಯೊಳಕ್ಕೆ ಕೊಳಕನ್ನೂ ಕಸವನ್ನೂ ಎಸೆಯುತ್ತಿದ್ದರು. ಅವಳು ಅದು ದೇವರ ಇಚ್ಛೆಯೆಂದು ಸ್ವೀಕರಿಸಿದಳು ಮತ್ತು ಎಂದೂ ಅವಳ ತುಟಿಗಳಿಂದ ದೂರಿನ ಒಂದು ಶಬ್ದವೂ ಹೊರಬೀಳಲಿಲ್ಲ.

ಅವಳಿಗೆ ಪುಟ್ಟ ಮುದ್ದಾದ ಹೂಜಿಯೊಂದರ ಬಗ್ಗೆ ಮಮತೆಯಿತ್ತು. ಯಾರೊ ಅದನ್ನು ಒಯ್ದುಬಿಟ್ಟರು. ಅದರ ಬದಲಿಗೆ ಭಾರವಾದ ಒಂದು ಒಡೆದ ಹೂಜಿಯನ್ನು ಇಡಲಾಯಿತು. ಆದದ್ದೆಲ್ಲ ಒಳ್ಳೆಯದೇ ಆಯಿತು ಎಂದು ತನಗೆ ತಾನೇ ಹೇಳಿಕೊಂಡಳು: 'ನಾನು ಇನ್ನುಮೇಲೆ ಈ ವಸ್ತುಗಳ ಮೇಲಿರುವ ವ್ಯಾಮೋಹದಿಂದ ಮುಕ್ತಳಾಗುತ್ತೇನೆ.'

ಒಡೆದುಹೋದ ಪುಷ್ಪಕರಂಡಕ್ಕಾಗಿ ಅವಳನ್ನು ತಪ್ಪಾಗಿ ದೂರಿದಾಗ ಅವಳು ನೆಲಕ್ಕೆ ಮುತ್ತಿಟ್ಟು ಇನ್ನು ಮುಂದೆ ಹೆಚ್ಚು ಎಚ್ಚರಿಕೆಯಿಂದಿರುವುದಾಗಿ ಆಣೆಮಾಡಿದಳು. ತನ್ನ ಜೊತೆಗೆ ಅಸಭ್ಯವಾಗಿ ವರ್ತಿಸುತ್ತಿದ್ದ ಸೋದರಿಯರ ಸೇವೆ ಮಾಡಲು ತನ್ನ ಶಕ್ತಿಮೀರಿ ಪ್ರಯತ್ನಿಸುತ್ತಿದ್ದಳು.

ಹಿರಿಯರು, ಜೊತೆಗಾರರು ಮಾಡಿದ ಅಪಮಾನಗಳನ್ನೆಲ್ಲಾ ಸಹಿಸುವುದಲ್ಲದೆ ಪ್ರೀತಿಯಿಂದ ಸ್ವಾಗತಿಸಿದಳು. ಸದಾ ಅಸಂತುಷ್ಟವಾಗಿರುವ ಒಬ್ಬ ಸಿಸ್ಟರ್ ಬಳಿ ಕೆಲಸ ಮಾಡಲು ಎಲ್ಲರೂ ಹಿಂಜರಿಯುತ್ತಿರುವಾಗ ಸ್ವಯಂಸಿದ್ಧಳಾಗಿ ಆಕೆಯ ಬಳಿ ಕೆಲಸಕ್ಕೆ ನಿಂತಳು ಥೆರೇಸ್. ಊಟದಲ್ಲಿ ಥೆರೇಸ್‌ಳ ಪ್ರಿಯ, ಅಪ್ರಿಯ ಭಕ್ಷ್ಯಗಳಾವುವು ಎಂದು ಕಂಡುಹಿಡಿಯುವುದೇ ಅಸಾಧ್ಯವೆನ್ನುತ್ತಿದ್ದರು, ಜೊತೆಯಲ್ಲಿ ಕುಳಿತವರು. ಆದ್ದರಿಂದ ಹೆಚ್ಚಾಗಿ ಉಳಿದಿರುವುದೆಲ್ಲಾ ಅವಳ ತಟ್ಟೆಗೇ ಹೋಗುತ್ತಿತ್ತು. ಪಾಪ! ಅನಾರೋಗ್ಯದಿಂದ ನರಳುವಾಗ ಅವಳ ಈ ತಪಸ್ಸು ಗೋಚರವಾಗುತ್ತಿತ್ತು. 'ಇನ್ನು ನಾನು ನೋವನ್ನು ಸಹಿಸಲಾರೆ. ಏಕೆಂದರೆ ನೋವೆಲ್ಲವೂ ನನ್ನ ಪಾಲಿಗೆ ಮಧುರವಾಗಿ ಪರಿಣಮಿಸಿದೆ'ಎನ್ನುವ ಹಂತವನ್ನು ತಲುಪಿದಳು. ಹೀಗೆ ದೈಹಿಕ

ದಂಡನೆಗಿಂತ ಆತ್ಮ ದಂಡನೆಯಿಂದ ಮಹಾನ್ ಸಂತಳಾದಳು ಇಪ್ಪತ್ತು ವರ್ಷದ ಈ ಸುಂದರ ಕ್ರಿಸ್ತನ ಭಕ್ತೆ!

ಏಪ್ರಿಲ್ ೧೮೯೫ ರಲ್ಲಿ ಒಮ್ಮೆ ಹಿರಿಯ ಸಿಸ್ಟರ್‌ರೊಡನೆ, 'ನನ್ನ ಸಾವು ಸಮೀಪಿಸುತ್ತಿದೆ. ನನ್ನ ಆತ್ಮದಲ್ಲಿ ಆಗುತ್ತಿರುವ ಬದಲಾವಣೆಗಳಿಂದಲೇ ಇದು ತಿಳಿಯುತ್ತಿದೆ' ಎಂದಳು. 'ದೇವರಿಗೆ ಪ್ರೀತಿಯನ್ನಲ್ಲದೆ ಬೇರೇನೂ ನೀಡಲಿಲ್ಲ ನಾನು. ಅದನ್ನವನು "ಪ್ರೀತಿ"ಯಿಂದಲೇ ಹಿಂದಿರುಗಿಸಿದ. ಭಗವಂತನನ್ನು ಹೇಗೆ ಪ್ರೀತಿಸುವುದು ಎಂದು ಹೇಳಿಕೊಡುವುದೇ ನನ್ನ ಧರ್ಮ ಪ್ರಚಾರಕಾರ್ಯ.. ನನ್ನ ಈ "ಚಿಕ್ಕ ವಿಧಾನ"ವನ್ನು ಇತರರಿಗೆ ತಿಳಿಸಿಕೊಡುವೆ....' ಎಂದು ಒಮ್ಮೆ ಹೇಳಿದ್ದನ್ನು ಕೇಳಿ ಮದರ್ ಅಗ್ನಿಸ್ ಆಫ್ ಜೀಸಸ್, 'ಆ ಚಿಕ್ಕ ವಿಧಾನ ಯಾವುದು?' ಎಂದು ಕೇಳಿದರು. ತಕ್ಷಣ ಈ ಏಸುವಿನ ಆಧ್ಯಾತ್ಮಿಕ ಪುತ್ರಿಯು, 'ಅದು ಆಧ್ಯಾತ್ಮಿಕ ಮಗುವಿನ ದಾರಿ, ದೃಢನಂಬಿಕೆ ಹಾಗೂ ಸಂಪೂರ್ಣ ಶರಣಾಗತಿಯ ಭಾವ' ಎಂದಳು.

ಸೆಪ್ಟೆಂಬರ್ ೧೮೯೭ನೆ ಇಸವಿ. ಸಾವು ಸಮೀಪಿಸುತ್ತಿದೆ. ಜೀವಿತದ ಕೊನೆಯ ಎರಡು ತಿಂಗಳು ಅಪಾರವಾದ ನೋವಿನಿಂದ ನರಳುತ್ತಿದ್ದರೂ ಆ ಮಂದಸ್ಮಿತ ವದನೆಯು, 'ಇವನ್ನು ಸಹಿಸಲು ನನಗೆ ಶಕ್ತಿಯನ್ನು ನೀಡಿದ ದೇವರು ನಿಜವಾಗಿಯೂ ಒಳ್ಳೆಯವನು' ಎಂದು ಉದ್ಗರಿಸಿದಳು. 'ಓಹ್!... ಅವನನ್ನು ಪ್ರೀತಿಸುವೆ... ನನ್ನ ದೇವರೇ, ನಾನು. ....ಆತನನ್ನು ... ಪ್ರೀತಿಸುವೆ!' ಇವೇ ಆ ಮಹಾನ್ ಬಾಲ ಸಂತಳ ಕೊನೆಯ ವಾಕ್ಯಗಳು. ತನ್ನ ಸರಳತೆ, ವಿನಮ್ರತೆ ಹಾಗೂ ಪ್ರೇಮದಿಂದ ದೇವರನ್ನು ಗೆದ್ದ ಸಂತ ಥೆರೇಸ್‌ಳಿಗೆ ಕ್ರಿಸ್ತನು ಸ್ವರ್ಗದ ಬಾಗಿಲನ್ನು ತೆರೆದುಬಿಟ್ಟನು.ಆಕೆ ದೇಹ ಬಿಟ್ಟಾಗ ಅವಳಿಗೆ ೨೪ ವರ್ಷ.

ಥೆರೇಸ್ ಚಿಕ್ಕವಳಾಗಿರುವಾಗ ಒಮ್ಮೆ ತುಂಬ ಖಾಯಿಲೆಯಿಂದ ನರಳುತ್ತಿದ್ದಳು. ಆಕೆಯ ಸಹೋದರಿಯರು ಅವಳ ಹಾಸಿಗೆಯ ಪಕ್ಕದಲ್ಲಿ ವರ್ಜಿನ್ ಮೇರಿಯ ವಿಗ್ರಹದ ಮುಂದೆ ಮಂಡಿಯೂರಿ ಪ್ರಾರ್ಥಿಸುತ್ತಿದ್ದರು. ಇದ್ದಕ್ಕಿದ್ದಂತೆಯೇ ಥೆರೇಸ್‌ಳಿಗೆ ಒಂದು ಅದ್ಭುತ ದರ್ಶನವಾಯಿತು. ವಿಗ್ರಹವು ಸ್ವರ್ಗೀಯ ಸೌಂದರ್ಯದಿಂದ ಬೆಳಗುತ್ತಿರುವಂತೆ ಕಂಡಳು. ಅದರ ಮುಖ ದಯಾಪೂರ್ಣವಾಗಿತ್ತು. ಯೇಸುವಿನ ತಾಯಿಯ ಮೋಹಕ ಮಂದಹಾಸ ಥೆರೇಸ್‌ಳ ಹೃದಯವನ್ನು ಕಲಕಿತು. ಕಣ್ಣೀರು ಉಕ್ಕಿ ಹರಿಯಿತು. ಥೆರೇಸ್‌ಳ ಖಾಯಿಲೆ ಗುಣವಾಯಿತು.

ಥೆರೇಸ್‌ಳು ಸೇರಿದ ಕಾರ್ಮಲೈಟ್ ಸಂನ್ಯಾಸಿನಿಯರ ಸಂಘದಲ್ಲಿ ಮೂರು ವರ್ಷಗಳ ಶಿಷ್ಯವೃತ್ತಿಯ ನಂತರ ಸಂನ್ಯಾಸ ದೀಕ್ಷೆಯನ್ನು ನೀಡಲಾಗುತ್ತಿತ್ತು. ಆದರೆ ಥೆರೇಸ್ ಕೊನೆಯವರೆಗೂ ನವಶಿಷ್ಯೆಯಾಗಿಯೇ ಇರಲು ಬಯಸಿದಳು. ನವಶಿಷ್ಯೆಯಾಗಿ ಇರುವುದೆಂದರೆ ಅತ್ಯಂತ ಸರಳ ಜೀವನ ನಡೆಸುತ್ತ ನಮ್ರತೆಯಿಂದ ಇತರರ ಕೈಕೆಳಗೆ ಕೆಲಸ ಮಾಡಿಕೊಂಡಿರುವುದು. ತನ್ನನ್ನು ತಾನು ಮರೆಮಾಚಿಕೊಂಡಿರಲು ಆಕೆ ಉನ್ನತ ಸ್ಥಾನಕ್ಕೇರಲು ಬಯಸಲೇ ಇಲ್ಲ. ಕೊನೆಯವರೆಗೂ ಸಾಮಾನ್ಯ ಮಹಿಳೆಯಾಗಿರಲು ಬಯಸಿದಳು.

ಥೆರೇಸ್ ಹೇಳುತ್ತಾಳೆ : 'ಪ್ರೀತಿಯಿಂದ ಮಾತ್ರವೇ ಪರಿಪೂರ್ಣತೆಯನ್ನು ಪಡೆಯಬಹುದು. ಬೇರೆ ದಾರಿಯೇ ಇಲ್ಲ. ನಮ್ಮ ಹೃದಯಗಳು ಪ್ರೀತಿಸುವುದಕ್ಕಾಗಿಯೇ ನಿರ್ಮಿತವಾಗಿರುವುದು.'

ಥೆರೇಸ್ ಆತ್ಮಚರಿತ್ರೆಯು ಆಕೆಯ ದೇಹತ್ಯಾಗವಾದ ಒಂದು ವರ್ಷದ ನಂತರ ಪ್ರಕಟವಾಯಿತು. ಅದು ಅತ್ಯಂತ ಸ್ಫೂರ್ತಿದಾಯಕ, ಪ್ರಸಿದ್ಧ ಧರ್ಮಗ್ರಂಥವಾದುದು ಮಾತ್ರವಲ್ಲದೆ ಅತ್ಯಧಿಕ ಮಾರಾಟವಾಗುವ ಪುಸ್ತಕವೂ ಆಯಿತು. ಅದನ್ನು ಓದಿದ ಅನೇಕ ನಾಸ್ತಿಕರು ಆಸ್ತಿಕರಾಗಿ ಪರಿವರ್ತಿತರಾಗಿರುವರು. ಆಧ್ಯಾತ್ಮಿಕ ಸಾಧಕರನೇಕರು ಅದನ್ನು ಓದಿ ತಮ್ಮ ಸಾಧನೆಗೆ ಹೆಚ್ಚು ಸ್ಫೂರ್ತಿಯನ್ನು ಪಡೆದಿದ್ದಾರೆ.